ಶ್ರೀಮತಿ ಟಿ. ಭಾಗೀರಥಿ :– ನಾನು ಹೇಳುತ್ತಿರುವುದು ನಾನು ಭರವಸೆಗಳ ಸಮಿತಿ ಸದಸ್ಯೆಯಾಗಿ ಯಾವ ಯಾವ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡುತ್ತಾರೋ ಆ ಭರವಸೆಗಳು ಅಲ್ಲಿ ಬಂದು ಉತ್ತರ ಸರ್ಕಾರ ಕೊಡುತ್ತದೆ. ಎಷ್ಟೆಷ್ಟು ವರ್ಷಗಳಿಂದ ಉತ್ತರ ಬಂದಿದೆಯೆಂದು ನೋಡಿದ್ದೇನೆ. ಮುಂದೆ ಒಂದು ದಿನ ಉತ್ತರ ಕೊಡುವಂಥ ಕಾಲದಲ್ಲಿ ಇದೇ ರೀತಿ ಉತ್ತರ ಕೊಡಬಾರದು. ಏನಾದರೂ ಒಂದು ದಿಕ್ಕು ಕಾಣಿಸಬೇಕು.

ಶ್ರೀ ಎನ್. ಧರಂಸಿಂಗ್ :– ಮಾನ್ಯ ಪ್ರಕಾಶ್‌ರವರು ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು. ಅವರು ಪ್ರತಿ ತಿಂಗಳೂ review meeting ಮಾಡುತ್ತಾರೆ. ತಾವು review ಮಾಡತಕ್ಕಂಥ ಸಮಯದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಕೆಲಸ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳು ಬಂದ ತಕ್ಷಣ ಮಾನ್ಯ ಸದಸ್ಯರ ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಎಂ.ಪಿ. ಪ್ರಕಾಶ್ :– ಇದು ಮಾನ್ಯ ಸದಸ್ಯರೊಬ್ಬರ ಪ್ರಶ್ನೆಯೇ ಅಲ್ಲ. ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಸಕರ ಪ್ರಶ್ನೆಯಿದೆ.

ಉಪಾಧ್ಯಕ್ಷರು :– ಬಳ್ಳಾರಿ ಜಿಲ್ಲೆ ಒಂದೇ ಅಲ್ಲ, ಚಿತ್ರದುರ್ಗ ಜಿಲ್ಲೆಯೂ ಸೇರಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೇ, 2ನೇ ತಾರೀಖು ಅಥವಾ 3ನೇ ತಾರೀಖು ಉತ್ತರ ಕೊಡಿಸುವುದರ ಜೊತೆಗೆ ಹಣ ಬಿಡುಗಡೆ ಮಾಡುವುದಕ್ಕೂ ನಾನು ಪ್ರಯತ್ನ ಮಾಡುತ್ತೇನೆ.

ಮಕ್ಕಳು ಕಾಣೆಯಾಗುತ್ತಿರುವುದು

277 (1781) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) :– ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಣೆಯಾಗುತ್ತಿರುವ ಮಕ್ಕಳ ಸಂಖ್ಯೆ ಅಧಿಕವಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು);

ಇ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿರುತ್ತದೆ.

ಆ) ಕಳೆದ ಮೂರು ವರ್ಷಗಳಲ್ಲಿ ಕಾಣೆಯಾಗಿರುವ ಮತ್ತು ಪತ್ತೆಯಾಗಿರುವ ಮಕ್ಕಳ ವಿವರಗಳು ಈ ಕೆಳಗಿನಂತಿವೆ.

ವರ್ಷ	ಕಾಣೆಯಾದ ಮಕ್ಕಳು	ಪತ್ತೆಯಾದ ಮಕ್ಕಳು
2004	4707	4304
2005	4952	4531
2006	5099	4432
2007 (ಫೆಬ್ರವರಿ 28ರವರೆಗೆ)	562	325

ಮಕ್ಕಳು ಕಾಣೆಯಾಗುತ್ತಿರುವುದಕ್ಕೆ ಕಾರಣಗಳು ಈ ಕೆಳಕಂಡಿರುತ್ತದೆ.

1. ಬುದ್ಧಿ ಮಾಂದ್ಯತೆ
2. ಅಪಹರಣಕಾರರ ದುಷ್ಕೃತ್ಯದಿಂದ
3. ಪೋಷಕರಿಂದ ಒತ್ತಡ, ಹಿಂಸೆ ಕಿರುಕುಳ ಅನುಭವಿಸಿದಾಗ
4. ಶಾಲೆಗಳಲ್ಲಿ ಶಿಕ್ಷಕರ ಭಯದಿಂದ

5. ದುಶ್ಚಟಗಳಿಗೆ ಒಳಗಾದಾಗ

6. ಬಡತನದಿಂದ ಬೇಸತ್ತು ಉದ್ಯೋಗಕ್ಕಾಗಿ ಬೇರೆ ಕಡೆ ಹೋದಾಗ

7. ಪರೀಕ್ಷೆ ಬರೆಯುವುದನ್ನು ತಪ್ಪಿಸಿಕೊಳ್ಳಲು

8. ಪ್ರೀತಿಸಿ ಓಡಿ ಹೋಗುವುದು.

ಇ) ಮಕ್ಕಳು ಕಾಣೆಯಾದ ಪ್ರಕರಣಗಳಲ್ಲಿ ಆದ್ಯತೆಯ ಮೇರೆಗೆ ತನಿಖೆಯನ್ನು ನಡೆಸಲಾಗುತ್ತಿದೆ. ಕಾಣೆಯಾದ ಮಕ್ಕಳ ಭಾವ ಚಿತ್ರವನ್ನು ದೂರದರ್ಶನ, ಮತ್ತು ದಿನಪತ್ರಿಕೆಗಳಲ್ಲಿ ಮತ್ತು ಕ್ರಿಮಿನಲ್ ಗೆಜೆಟ್‌ನಲ್ಲಿ ಪ್ರದರ್ಶಿಸಲಾಗುತ್ತಿದೆ ಹಾಗೂ ರೆಡಿಯೋ ಮೂಲಕ ಸಹ ಪ್ರಕಟಣೆಯನ್ನು ಹೊರಡಿಸಲಾಗುತ್ತಿದೆ. ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಲಾಗುತ್ತಿದೆ. ವಿವಿಧ ರಿಮ್ಯಾಂಡ್ ಹೋಂಗಳಲ್ಲಿ ಪರಿಶೀಲಿಸುವ ಕಾರ್ಯ ಮಾಡಲಾಗುತ್ತಿದೆ. ಕಾಣೆಯಾದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಯ ಉಪಾಧ್ಯಾಯರನ್ನು ಮಕ್ಕಳನ್ನು ಮತ್ತು ಮಗುವಿನ ಸಂಬಂಧಿಕರ ಅಕ್ಕಪಕ್ಕದವರ ಮನೆಯವರನ್ನು ವಿಚಾರಿಸಲಾಗುತ್ತಿದೆ. ಮಕ್ಕಳ ಭಾವಚಿತ್ರವನ್ನು ಠಾಣೆಯ ಎಲ್ಲಾ ಸಿಬ್ಬಂದಿಯವರಿಗೆ ಚಹರೆ ಬಗ್ಗೆ ತಿಳಿಸಿ ಇತರೇ ಕಾರ್ಯಗಳಿಗೆ ನೆರೆ ಜಿಲ್ಲೆಗಳಿಗೆ ಭೇಟಿ ನೀಡುವ ಸಂದರ್ಭಗಳಲ್ಲಿ ಹೋಟೆಲ್, ಪಾರ್ಕ್, ಬಸ್ ನಿಲ್ದಾಣ ಮುಂತಾದ ಸ್ಥಳಗಳಲ್ಲಿ ಪತ್ತೆ ಕಾರ್ಯಕ್ಕೆ ನೇಮಕ ಮಾಡಲಾಗುತ್ತಿದೆ.

ಶ್ರೀ ಎಸ್. ಬಾಲರಾಜ್ :– ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಉತ್ತರ ಕೊಟ್ಟಿದ್ದಾರೆ. ಆದರೆ ಇವತ್ತು ಒಂದು ಆತಂಕಕಾರಿ ವಿಷಯವೆಂದು ಹೇಳಿದರೆ ಮಕ್ಕಳು ಕಾಣೆಯಾಗುತ್ತಿದ್ದಾರೆ. ಕಾಣೆಯಾಗಿರುವ ಬಗ್ಗೆ ಅನೇಕ ಕಾರಣಗಳಿರಬಹುದು. ಸುಮಾರು 8 ಕಾರಣಗಳನ್ನು ಸರ್ಕಾರದ ಉತ್ತರದಲ್ಲಿ ಒದಗಿಸಿದ್ದಾರೆ. ಆದರೆ ಇದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೆ. ಆದರೆ ಉತ್ತರದಲ್ಲಿ ಯಾವ ಠಾಣೆಯಲ್ಲಿ ಮೊಕದ್ದಮೆ ಹೂಡಿರುತ್ತಾರೆ ಅದಕ್ಕೆ ಸಂಬಂಧಿಸಿದಂತೆ ಮಾತ್ರ ಉತ್ತರಗಳು ಬಂದಿವೆ. ಆದರೆ ದೂರದರ್ಶನದಲ್ಲಿ ತೋರಿಸತಕ್ಕಂಥಾದ್ದು, ಪ್ರತಿನಿತ್ಯ ಪತ್ರಿಕೆಗಳಲ್ಲಿ ಪ್ರದರ್ಶನ ಮಾಡುವಂಥಾದ್ದು, ರೇಡಿಯೋ ಮೂಲಕ ಹೇಳುವಂಥಾದ್ದು, ಮತ್ತು

ಅವರ ವಿದ್ಯಾಭ್ಯಾಸ ಶಾಲೆಯಲ್ಲಿ ವಿಚಾರಿಸತಕ್ಕಂಥಾದ್ದು, ಅಕ್ಕಪಕ್ಕದಲ್ಲಿ ವಿಚಾರಿಸತಕ್ಕಂಥಾದ್ದು, ಇತ್ಯಾದಿ ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ನನ್ನ ಪ್ರಶ್ನೆ ಏನೆಂದರೆ ಇಂತಹ ಒಂದು ಅಮಾನವೀಯ ಅಪಾಯಕಾರಿ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ಎನ್ನುವುದನ್ನು ನಾನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) :– ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಮಾನವೀಯತೆ ದೃಷ್ಟಿಯಿಂದ ಕೇಳಿದ್ದಾರೆ. ಅದರಲ್ಲಿ ಮಕ್ಕಳ ಅಪಹರಣ ಮಾಡತಕ್ಕಂಥಾದ್ದು, ಕಾಣೆಯಾಗಿರುವಂಥಾದ್ದು, ದೆಹಲಿಯಲ್ಲಿ ಆದಂಥ ಪ್ರಕರಣವನ್ನು ನೋಡಿದ ಮೇಲೆ ಏನೆಲ್ಲಾ ಅನಾಹುತಗಳು ಆಗುತ್ತವೆನ್ನುವುದು ಗೊತ್ತಿದೆ. ಇಲ್ಲಿ 15,320 ಮಕ್ಕಳು ಕಾಣೆಯಾಗಿದ್ದಾರೆಂದು ನಮ್ಮಲ್ಲಿ ದೂರುಗಳು ಬಂದವು. ಅದರಲ್ಲಿ 13,592 ಮಕ್ಕಳನ್ನು ವಾಪಸ್ಸು ಅವರವರ ಪಾಲಕ ಪೋಷಕರಿಗೆ ಒಪ್ಪಿಸಿದ್ದೇವೆ. ಅಂದರೆ ಶೇ.80 ಕ್ಕಿಂತ ಹೆಚ್ಚು ಮಕ್ಕಳು ಕಾಣೆಯಾಗಿರುವವರನ್ನು ನಾವು ಹುಡುಕಿದ್ದೇವೆ. ಅದಕ್ಕಾಗಿಯೇ ನಾವು ಪೊಲೀಸ್ ಇಲಾಖೆಯನ್ನು ಅಭಿನಂದಿಸುತ್ತೇನೆ. ಇನ್ನೂ 20% ಬಿಟ್ಟಿದ್ದೀರಿ ಎನ್ನುವುದಾದರೂ ಕೂಡ ಅನೇಕ ಬಾರಿ ವಾಪಸ್ಸು ಬಂದಿರತಕ್ಕಂಥ ಮಕ್ಕಳ ಮಾಹಿತಿಯನ್ನು ಅವರ ತಂದೆತಾಯಿಗಳು ಕೊಡುವುದಿಲ್ಲ. ಆ ಸಂದರ್ಭದಲ್ಲಿಯೂ ಕೂಡ ನಮಗೆ ಮಾಹಿತಿ ಪೂರ್ಣ ವಾಗಿರುವುದಿಲ್ಲ. ನಿಮಗೆ ಗೊತ್ತಿದ್ದಂತೆ ನಮ್ಮ ಕ್ರಿಮಿನಲ್ ಗೆಜೆಟ್‌ನಲ್ಲಿ ಅವರ ಭಾವಚಿತ್ರವನ್ನು ಅಂಟಿಸುವುದರ ಜೊತೆಗೆ ನಮ್ಮ ಇಲಾಖೆಯ ಹೊರಗಡೆಗೆ ಎಲ್ಲಿಯಾದರೂ ಮಕ್ಕಳು ಕಂಡರೆ ಅವರನ್ನು ಹಿಡಿಯಬೇಕು ಎನ್ನತಕ್ಕಂಥಾದ್ದರ ಬಗ್ಗೆ ಬಸ್ ನಿಲ್ದಾಣಗಳಲ್ಲಿ, ರೈಲ್ವೇ ಸ್ಟೇಷನ್‌ಗಳಲ್ಲಿ ಜನಸಂದಣಿ ಇರತಕ್ಕಂಥ ಪ್ರದೇಶಗಳಲ್ಲಿಯೂ ಕೂಡ ಈ ಬಗ್ಗೆ ಏರ್ಪಾಡನ್ನು ಮಾಡಿದ್ದೇವೆ. ಮಕ್ಕಳು ಎಳೆ ವಯಸ್ಸಿನಲ್ಲಿ ಅದು ಒಂದು formative years ಎಂದು ಏನು ಹೇಳುತ್ತೇವೆ, ಆ ಒಂದು ಸಂದರ್ಭದಲ್ಲಿ ಅವರ ಮೇಲೆ ಶಿಕ್ಷಣದ ಕಾರಣಕ್ಕಾಗಿ ಒತ್ತಡಗಳು ಬಂದಾಗ, ತಂದೆತಾಯಿಗಳ ನಡುವೆ ಇರತಕ್ಕಂಥ ವೈ ಮನಸ್ಸಿನಿಂದ, ಒಡೆದು ಹೋದ ಕುಟುಂಬಗಳ ಮಕ್ಕಳ ಮೇಲೆ ಹಾಗೆಯೇ ಬಡತನದಿಂದ ಬೇಸತ್ತು ಉದ್ಯೋಗಕ್ಕಾಗಿ

ಬಂದಿರತಕ್ಕಂಥವರು, ಅಪಕರಣಕಾರರ ದುಷ್ಕೃತ್ಯದಿಂದಾಗಿ ಪೋಷಕರ ಒತ್ತಡ, ಹಿಂಸೆ, ಕಿರುಕುಳ ಇವೆಲ್ಲವೂ ಕೂಡ ಇದೆ. ತಮಗೂ ಕೂಡ ಗೊತ್ತಿದೆ, ತಾವು ಕಲಾವಿದರು. ನಮ್ಮ ಕಾಸರವಳ್ಳಿಯವರು ಕ್ರೌರ್ಯ ಎನ್ನುವ ಒಂದು ಚಿತ್ರ ಮಾಡಿದ್ದಾರೆ. ಅದಕ್ಕೆ ದೊಡ್ಡ ಸಹ ಬಂತು, ಅದು ಬಹಳ ಅದ್ಭುತವಾದಂಥ ಸಿನಿಮಾ. ತಂದೆತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಅವರನ್ನು ಓದಿಸುವುದು, ಅವರು marks ತೆಗೆದುಕೊಳ್ಳುವಂಥ ವಿಚಾರದಲ್ಲಿ ಎಷ್ಟು ಒತ್ತಡವನ್ನು ಅವರ ಮೇಲೆ ಕೊಡುತ್ತಾರೆ ಎನ್ನುವಂಥಾದ್ದು ಮತ್ತೊಂದು ತರಹದ ಕ್ರೌರ್ಯ ಎಂದು ಹೇಳಿ ಅದು ಬಹಳ ಅದ್ಭುತವಾದಂಥ ಚಿತ್ರ. ಮಕ್ಕಳಿಗೆ ಅಜ್ಜಿ ಕಥೆ ಹೇಳುವಾಗ ಅವರ ಹತ್ತಿರ ಬಂದು ಕುಳಿತುಕೊಳ್ಳುವಂಥ ಸಂತೋಷ, ತಂದೆ ಬೆತ್ತ ಹಿಡಿದುಕೊಂಡು ಓಡಾಡುವಾಗ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆ. ಅಂಥ ಸಂದರ್ಭದಲ್ಲಿ ಅವರು ತಪ್ಪಿಸಿಕೊಂಡು ಹೋಗುತ್ತಾರೆ. ನೀವು ಹೇಳಿದಂತೆ ನಾವು ಇನ್ನೂ ಚುರುಕಾಗಿ ಕೆಲಸ ಮಾಡಬೇಕಾಗಿದೆ. ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್ :– ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮಲ್ಲಿ ಏನಾಗಿದೆಯೆಂದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ಕಾರ್ಯವೈಖರಿ ಮತ್ತು ಗೃಹ ಇಲಾಖೆಯಲ್ಲಿ ಯಾವ ಕೇಸ್ ರಿಜಿಸ್ಟರ್ ಆಗುತ್ತದೆ ಅದಕ್ಕೆ ಸಂಬಂಧಪಟ್ಟಂತೆ F.I.R. ತಯಾರು ಮಾಡಿ ಕೊಡುವಂತಹ ಪ್ರಯತ್ನ ಆಗುತ್ತದೆ ಮತ್ತು ಈ ವಿದ್ಯಾ ಇಲಾಖೆಯಲ್ಲಿಯೂ ಕೂಡ ಶಾಲೆಗೆ ಮಕ್ಕಳು ಇಷ್ಟು ದಿನ ಬರಲಿಲ್ಲವೆಂದ ಮೇಲೆ ಏತಕ್ಕೆ ಬರಲಿಲ್ಲವೆನ್ನುವಂಥ ಪತ್ತೆಯನ್ನೂ ಸಹ ಅವರು ಮಾಡಬೇಕು. ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಇವೆಲ್ಲವನ್ನೂ ಹೊರತುಪಡಿಸಿರತಕ್ಕಂಥ ಮಕ್ಕಳು ಏನಿದ್ದಾರೆ, ಅವರೆಲ್ಲರನ್ನೂ ಕೂಡ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅವರನ್ನೂ ಕೂಡ ಒಂದು ರಿಜಿಸ್ಟ್ರೇಷನ್ ಮಾಡಿಸುವ ಮುಖಾಂತರ ಅಥವಾ information centre ಮಾಡುವ ಮೂಲಕ ವಿಶೇಷ ಗ್ರಾಮಸಭೆಗಳನ್ನು ಮಾಡುವ ಮುಖಾಂತರ ಸಮಗ್ರವಾಗಿ ಈ ನಾಲ್ಕು ಇಲಾಖೆಗಳ ಮೂಲಕ ಒಂದು ಇಲಾಖೆಯನ್ನಾಗಿ ಮಾಡಿ ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ನನಗೆ ಬಂದಿರತಕ್ಕಂಥ ಮಾಹಿತಿ

ಮತ್ತು ಮಾಧ್ಯಮಗಳ ಮೂಲಕ ಒಂದು ದಿವಸಕ್ಕೆ ಕನಿಷ್ಠ ಬೆಂಗಳೂರಿನಂಥ ನಗರದಲ್ಲಿ 35 ಜನ ಮಕ್ಕಳು ಕಾಣೆಯಾಗುತ್ತಿದ್ದಾರೆ. ಬಹುಶಃ ಈ ರಾಜ್ಯದಲ್ಲಿ ರಿಜಿಸ್ಟರ್ ಆಗದಿರುವಂಥ ಕೇಸ್‌ಗಳು ಎಷ್ಟು ಇರಬಹುದು? ಈ ದೇಶದ ಅಂಕಿ ಅಂಶಗಳ ಪ್ರಕಾರ 42% ಮಕ್ಕಳು ಇದ್ದಾರೆ ನಾವು ಮಕ್ಕಳು ಎಂದು ಗುರುತಿಸುತ್ತೇವೆ. ಹುಟ್ಟಿದಾಗಿನಿಂದಲೂ ಹಿಡಿದು 18 ವರ್ಷದೊಳಗೆ ಇರುವಂಥ ಎಲ್ಲರನ್ನೂ ನಾವು ಮಕ್ಕಳೆಂದು ಗುರುತಿಸುತ್ತೇವೆ. ಆದರೆ ಇಷ್ಟು ಸಂಖ್ಯೆಯಲ್ಲಿರತಕ್ಕಂಥ ಮಕ್ಕಳಿಗೆ ನಾವು ಸಂವಿಧಾನಾತ್ಮಕ ಹಕ್ಕನ್ನು ಏನು ಕೊಟ್ಟಿದ್ದೇವೆ, ಅವರ ಬೆಳವಣಿಗೆಯನ್ನು ಪೂರಕವಾಗಿ ನಾವು ಉಳಿಸಿಕೊಂಡಿದ್ದೇವೆ. ಮಕ್ಕಳಿಗೆ ಮಾನಸಿಕ ಒತ್ತಡ ಇದೆ. ಅಥವಾ ಊಟದ ಕಷ್ಟದಲ್ಲಿಯೋ ಅಥವಾ ಇನ್ನಾವುದೋ ಸಮಸ್ಯೆಗಳನ್ನೆಲ್ಲಾ ಮಾನ್ಯ ಸಚಿವರು ತಿಳಿಸಿದ್ದಾರೆ. ಇಷ್ಟೆಲ್ಲಾ ಸಮಸ್ಯೆಗಳಿಂದ ಅವರು ಊರು ಬಿಟ್ಟು ಹೊರಗಡೆ ಬಂದಿದ್ದಾರೆಂದರೆ, ಮುಂದೆ ಏನು ಆಗುತ್ತಾರೆ ಆ ಮಕ್ಕಳು? ಗಂಡು ಮಗವಾಗಿದ್ದರೆ ಅವನು criminal ಆಗಿ ರೂಪುಗೊಂಡು ಹೋಗುತ್ತಾನೆ. ಇದು ಬಹಳ ಗಹನವಾದ ವಿಚಾರವಾಗಿರುವುದರಿಂದ ಇದಕ್ಕೆ ಬೇರೆ ಒಂದು ಸಮಯವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದರಲ್ಲಿ ಬಹಳಷ್ಟು ವಿಚಾರಗಳನ್ನು ಮಾತನಾಡಬಹುದು.

ಉಪಾಧ್ಯಕ್ಷರು :– ನೀವು ಇದನ್ನು ಪ್ರಶ್ನೆ ತರಹ ಕೇಳಬೇಕು.

ಶ್ರೀ ಎಸ್. ಬಾಲರಾಜ್ :– ನಾನು ಕೆಲವು ಸಲಹೆಗಳನ್ನು ಈ ಸಂದರ್ಭದಲ್ಲಿ ಕೂಡಲೇ ಬೇಕಾಗುತ್ತದೆ. ಅದಕ್ಕಾಗಿ ಇದೆಲ್ಲವನ್ನು ಒಟ್ಟು ಮಾಡಿ, ಒಂದು ಕಡೆ ಸೇರಿಸಿ, ನಮಗೆ ಕಾನೂನು ಬದ್ಧವಾಗಿ ಮಕ್ಕಳ ಪಾಲನೆಯನ್ನು ಮಾಡುವುದಕ್ಕೆ ಯಾವ ರೀತಿ ಸಾಧನೆ ಮಾಡಬಹುದು, ನಾವು ಏನು ಹಕ್ಕನ್ನು ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡಿ, ಈ J.J.Act ನ್ನು implement ಮಾಡುವುದರ ಮುಖಾಂತರ ಮಕ್ಕಳನ್ನು ಪಾಲನೆ ಮಾಡುವಂಥ ಒಂದು ಶಿಕ್ಷಣವನ್ನು ಮತ್ತು ಒಂದು ಕಾನೂನನ್ನು ಜಾರಿಗೆ ತಂದರೆ ಖಂಡಿತವಾಗಿ ಸಮಾಜದಲ್ಲಿ ಒಂದು ಸ್ಥಾನವನ್ನು ಕೊಟ್ಟಂತಾಗುತ್ತದೆ. ನಾವೂ ಕೂಡ ಮಕ್ಕಳ ಬಗ್ಗೆ ಒಂದು ಕಾಳಜಿಯನ್ನು ವಹಿಸಿ, ನಾವು ಏನೇನೋ ಯೋಜನೆಗಳನ್ನು ತಯಾರು ಮಾಡುತ್ತೇವೆ, ಮಕ್ಕಳನ್ನು ಬಹಳ ಕಿರಿಯ ವಯಸ್ಸಿನಲ್ಲಿ ತಯಾರು ಮಾಡಿದರೆ ಒಳ್ಳೆಯದಾಗುತ್ತದೆನ್ನುವ

ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡುವುದಕ್ಕೆ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, ಬಹಳ ಉತ್ತಮವಾದ ಸಲಹೆಯನ್ನು ಮಾನ್ಯ ಬಾಲರಾಜ್‌ರವರು ಕೊಟ್ಟಿರುತ್ತಾರೆ. ನಿಜವಾಗಲೂ ಇದೊಂದು ದುರಂತ, ನಿಮ್ಮ ಮಾಹಿತಿ ನಿಜ ಇರಬಹುದು, ಇಂತಹ ದೊಡ್ಡ ಊರಿನಲ್ಲಿ ದಿನಕ್ಕೆ 35 ಜನ ಮಕ್ಕಳು ಕಾಣೆಯಾಗುತ್ತಾರೆಂದರೆ, ಈ ಸಮಾಜ ಎಷ್ಟು ನಿರ್ಲಕ್ಷ್ಯ ತೋರಿಸುತ್ತಿದೆ ಎಂದರೆ child is the father of the man ಎನ್ನುವ ರೀತಿಯಾಗುತ್ತಿದೆ. ಮಕ್ಕಳು ದುರಂತಕ್ಕೆ ಒಳಗಾಗುವುದು ಬಹಳ ಹಿಂಸೆಯಾಗತಕ್ಕಂಥಾದ್ದು. ಈ ವಿಚಾರದಲ್ಲಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ H.K. ಕುಮಾರಸ್ವಾಮಿಯವರ ಜೊತೆಯಲ್ಲಿ ಮಾತನಾಡಿ ಈ ಬಗ್ಗೆ ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಿ, ನಾನು ತಮಗೆ ಭರವಸೆಯನ್ನು ಕೊಡುತ್ತೇನೆ.

ಕೆ.ಆರ.ಡಿ.ಸಿ.ಎಲ್. ಹಾಗೂ ಕೆ.ಸಿಪಿ

278 (1687) ಶ್ರೀ ಪಾಟೀಲ್ ಡಿ.ಆರ್. (ಗದಗ್) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ನದಿಗೆ ಕೂರ್ಲಹಳ್ಳಿ ಸೇತುವೆ ನಿರ್ಮಾಣವಾದುದರಿಂದ ಆ ಭಾಗಕ್ಕೆ ಪೂರ್ಣ ಪ್ರಯೋಜನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆ ನಿರ್ಮಾಣದಿಂದ ಕಾರವಾರ ಗುತ್ತಿ ರಾಷ್ಟ್ರೀಯ ಹೆದ್ದಾರಿ–63 ಹಾಗೂ ಸೋಲಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–13ನ್ನು ಹಡಗಲಿ–ಜಗಳೂರು ಮೂಲಕ ಜೋಡಿಸುವುದರಿಂದ ಬೆಂಗಳೂರು–ಗದಗ ರಸ್ತೆ ಅಂತರ ಎಷ್ಟು ಕಡಿಮೆಯಾಗುವುದು;